# ಗುರುಕೃಪಾಶಕ್ತಿ

ಶ್ರೀಮಾತೆಯವರ ಮನದಾಳದಲ್ಲಿ ಸರ್ವದಾ ಮಂತ್ರ-ಜಪ ನಡವೇ ಇರುತ್ತಿತ್ತು. ಕೊನೆಗಾಲದಲ್ಲಿ ಶಾರೀರಿಕ ದೌರ್ಬಲ್ಯದಿಂದ ಯಾವಾಗಲೂ ಮಲಗಿಕೊಂಡೇ ಇರಬೇಕಾಗುತ್ತಿತ್ತು. ಆದರೆ ಆ ಸ್ಥಿತಿಯಲ್ಲಿಯೂ ಅವರು ಜಪ ನಿಲ್ಲಿಸದಿರುವುದು ಸೇವಕರ ಗಮನಕ್ಕೆ ಬರುತ್ತಿತ್ತು. ರಾತ್ರಿ ನಿದ್ರೆ ಅತ್ಯಲ್ಪ—ಕರೆದ ಕೂಡಲೆ ಓಗೊಡುತ್ತಿದ್ದರು. ಸೇವಕ ವಿಸ್ಮಯದಿಂದ ಪ್ರಶ್ನಿಸುತ್ತಿದ್ದ, "ಏನು ತಾವು ನಿದ್ರಿಸುವುದಿಲ್ಲವೆ? ಅಥವಾ ನಿದ್ರೆ ಬರುವುದಿಲ್ಲವೆ?" ಎಂದು. ಶ್ರೀಮಾತೆಯವರು ಹೇಳುತ್ತಿದ್ದರು : "ಏನು ಮಾಡಲಿ ಮಗು, ಮಕ್ಕಳು ಅಂಗಲಾಚುತ್ತ ಬರುತ್ತಾರೆ. ಬಲವಂತದಿಂದ ದೀಕ್ಷೆ ಪಡೆದು ಹೋಗುತ್ತಾರೆ. ಆದರೆ ನಿಯಮಿತ ಭಾವದಲ್ಲಿ ಯಾರೂ ಜಪ ಮಾಡುವುದಿಲ್ಲ. ಅವರ ಭಾರ ಹೊತ್ತಮೇಲೆ ಅವರನ್ನು ನೋಡಿಕೊಳ್ಳಬೇಕು ತಾನೆ? ಅದಕ್ಕಾಗಿಯೇ ಜಪ ಮಾಡುತ್ತೇನೆ, ಮತ್ತೆ ಅವರಿಗಾಗಿ ಠಾಕುರರನ್ನು ಪ್ರಾರ್ಥಿಸುತ್ತೇನೆ, 'ಹೇ ಠಾಕುರ್, ಅವರಿಗೆ ಚೈತನ್ಯ ನೀಡು, ಮುಕ್ತಿಕೊಡು. ಅವರ ಇಹ-ಪರಗಳನ್ನು ನೀನೇ ನೋಡಿಕೊ. ಈ ಸಂಸಾರದಲ್ಲಿ ದುಃಖ-ಕಷ್ಟಕ್ಕೆ ಮಿತಿಯಿಲ್ಲ. ಅವರು ಮತ್ತೆ ಬರದಂತಾಗಲಿ.'"

* * *

೧೯೧೬ರ ದುರ್ಗಾಪೂಜೆಯ ಸಮಯದಲ್ಲಿ ಶ್ರೀಮಾತೆಯವರು ಬೇಲೂರು ಮಠದಲ್ಲಿದ್ದರು. ಅಷ್ಟಮಿಯ ದಿನ ಬಹುಮಂದಿ ವ್ಯಕ್ತಿಗಳು ಅವರ ಪಾದವನ್ನು ಸ್ಪರ್ಶಿಸಿ ಪ್ರಣಾಮ ಮಾಡಿ ಹೋದಮೇಲೆ ಅವರು ಗಂಗಾಜಲದಿಂದ ಪಾದವನ್ನು ಮತ್ತೆ ಮತ್ತೆ ತೊಳೆಯುತ್ತಿದ್ದರು. ಯೋಗೀನ್ ಮಾ ಅದನ್ನು ಗಮನಿಸಿ ವಿಚಾರಿಸಿದಳು, "ತಾಯಿ, ಇದೇನಿದು? ಆಮೇಲೆ ನೆಗಡಿಯಾಗುವುದು" ಎಂದು. ಅವರಂದರು, "ಯೋಗೀನ್, ಏನು ಹೇಳಲಿ, ಕೆಲವರು ಬಂದು ಪ್ರಣಾಮ ಮಾಡಿದರೆ ಕಾಲು ತಣ್ಣಗಾಗುವುದು, ಮತ್ತೆ ಕೆಲವರು ಪ್ರಣಾಮ ಮಾಡಿದರೆ ಕಾಲಿಗೆ ಬೆಂಕಿ ಇಟ್ಟಂತಾಗುವುದು. ಗಂಗಾಜಲದಿಂದ ತೊಳೆಯದಿದ್ದರೆ ಆಗುವುದೇ ಇಲ್ಲ."

ಈ ಪ್ರಣಾಮದಿಂದ ತಮಗೆ ಕಷ್ಟವಾಗುವುದು ತಿಳಿದೂ ಶ್ರೀಮಾತೆಯವರು ಭಕ್ತರಿಗೆ ಶುಭವಾಗಲೆಂದು ಪ್ರಣಾಮ ಸ್ವೀಕರಿಸುತ್ತಿದ್ದರು. ಒಮ್ಮೆ ಭಕ್ತನೊಬ್ಬ ಹೇಳಿದ : "ತಾಯಿ, ಭಕ್ತರ ಪಾಪಗ್ರಹಣ ಮಾಡಿದ್ದರಿಂದಲೆ ನಿಮಗಿಷ್ಟೊಂದು ಕಾಯಿಲೆ ಎಂದು ಕೇಳಿದೆ. ನನ್ನದೊಂದು ಹೃತ್ಪೂರ್ವಕ ನಿವೇದನೆ ಏನೆಂದರೆ ನನಗಾಗಿ ನೀವು ಅನುಭವಿಸುವುದು ಬೇಡ. ನನ್ನ ಕರ್ಮದ ಫಲವನ್ನು ನಾನೇ ಭೋಗಿಸುವಂತೆ ಮಾಡಿ." "ಅದೇನು ನುಡಿಯುತ್ತಿರುವೆ? ನೀವೆಲ್ಲ ಚೆನ್ನಾಗಿರಿ, ನಾನೇ ಅನುಭವಿಸುತ್ತೇನೆ" —ಥಟ್ಟನೆ ನುಡಿದರು ಶ್ರೀಮಾತೆಯವರು.

ತಾವು ಇಷ್ಟೊಂದು ಕಷ್ಟ ಅನುಭವಿಸಿಯೂ ಅವರ ಪರಹಿತಾಸಕ್ತಿ ಎಷ್ಟೊಂದು ತೀವ್ರವಾಗಿತ್ತೆಂದರೆ ಜಯರಾಂಬಾಟಿಯಲ್ಲಿರುವಾಗ ಎಂದಾದರೂ ಯಾವ ಭಕ್ತರೂ ಬರದಿದ್ದರೆ "ಇಂದು ಯಾರೂ ಬರಲೇ ಇಲ್ಲ" ಎಂದು ನೊಂದು ನುಡಿಯುತ್ತಿದ್ದರು. ವಾತರೋಗದಿಂದ ಅವರಿಗೆ ನಡೆಯುವುದೂ ದುಃಸಾಧ್ಯವಾಗಿದ್ದಾಗ ಅವರು ಹೀಗೆ ಹೇಳುತ್ತಿದ್ದುದು ಕೇಳಿಸಿತು ಸ್ವಾಮಿ ಗೌರೀಶಾನಂದರಿಗೆ: "ಈ ದಿನವೂ ವ್ಯರ್ಥವಾಗಿ ಹೋಯಿತು, ಯಾರೂ ಬರಲಿಲ್ಲ. ನೀನು ಹೇಳಿರಲಿಲ್ಲವೆ 'ನೀನು ಪ್ರತಿನಿತ್ಯವೂ ಏನಾದರೂ ಮಾಡಲೇಬೇಕು' ಎಂದು?" ಹೀಗೆ ಹೇಳುತ್ತ ಆಗಾಗ ಹೊರಗೆ ಇಣಿಕಿನೋಡುತ್ತಿದ್ದರು. ಮರುದಿನ ಮೂವರು ಭಕ್ತರು ಬಂದಾಗ ಅವರ ಮುಖ ಆನಂದದಿಂದ ಅರಳಿತು. ಆ ಮೂವರು ಸ್ವಾಮಿ ಬ್ರಹ್ಮಾನಂದರಿಂದ ಪರಿಚಯ ಪತ್ರದೊಡನೆ ಬಂದಿದ್ದರು. ಆ ಭಕ್ತರ ಪ್ರಣಾಮವಾದ ಮೇಲೆ ಅವರು ಖೇದದಿಂದ ನುಡಿದರು: "ಕೊನೆಗೆ ರಾಖಾಲ್ ನನಗಿದನ್ನು ಕಳಿಸಿದ. ಮಕ್ಕಳು ಬೇರೆ ಊರಿನಿಂದ ಎಷ್ಟೋ ಒಳ್ಳೆಯ ವಸ್ತುಗಳನ್ನು ಕಳಿಸುತ್ತಾರೆ, ಮತ್ತೆ ರಾಖಾಲ್ ನನಗಾಗಿ ಇದನ್ನು ಕಳಿಸಿದನೆ?" ಆ ಭಕ್ತರಿಗೆ ದೀಕ್ಷೆ ನೀಡಲು ಸಮ್ಮತಿಸದೆ ಅವರು ಬೇಲೂರು ಮಠಕ್ಕೆ ಹೋಗಬೇಕೆಂದು ಹೇಳಿದರು: ಭಕ್ತರು ಹೊರಗೆ ಬಂದರು. ನಿರಾಸೆಯಿಂದ ಮನಸ್ಸು ಕೊರೆಯುತ್ತಿತ್ತು. ಮನೋ ವೇದನೆಯನ್ನು ತಾಳಲಾರದೆ ಅವರು ಮತ್ತೆ ಒಳಗೆ ಹೋಗಿ ತಮ್ಮ ಮೇಲೆ ಕೃಪೆ ತೋರಬೇಕೆಂದು ಶ್ರೀಮಾತೆಯವರನ್ನು ಅಂಗಲಾಚಿ ಬೇಡಿಕೊಂಡರು. ಶ್ರೀಮಾತೆಯವರು ಅವರ ಬಲವಂತಕ್ಕೆ ಮಣಿಯಲೇಬೇಕಾಯಿತು.

ಅಂತೂ ದೀಕ್ಷೆ ಆಯಿತು. ಕೆಲವು ದಿನಗಳಾದಮೇಲೆ ಬೇಲೂರು ಮಠದಲ್ಲಿ ಸ್ವಾಮಿಗಳಾದ ಬ್ರಹ್ಮಾನಂದ, ಪ್ರೇಮಾನಂದ, ಶಾರದಾನಂದ ಮತ್ತು ಶಿವಾನಂದ—ಇವರು ಪರಸ್ಪರ ಮಾತನಾಡುತ್ತಿದ್ದರು. ಆಗ ಈ ಘಟನೆಯ ವಿಷಯ ಬಂತು. ಬ್ರಹ್ಮಾನಂದರು ಇದನ್ನೇ ಚಿಂತಿಸುತ್ತ ಬಹಳ ಹೊತ್ತು ಸ್ತಬ್ಧರಾಗಿ ಕುಳಿತರು. ಪ್ರೇಮಾನಂದರು ದೀರ್ಘ ನಿಟ್ಟುಸಿರು ಬಿಟ್ಟು ಕೈಮುಗಿದು ಹೇಳಿದರು: "ಕೃಪಾ, ಕೃಪಾ! ಈ ಅಪಾರ ಕೃಪೆಯ ಮೂಲಕವೆ ತಾಯಿ ಸದಾ ರಕ್ಷಿಸುತ್ತಿರುವರು. ಅವರು ಎಂಥ ವಿಷ ಸ್ವೀಕರಿಸಿದರೊ, ಅದನ್ನು ನಾವು ಭಾಷೆಯ ಮೂಲಕ ವ್ಯಕ್ತಪಡಿಸಲಾರೆವು. ಆ ವಿಷವನ್ನು ನಾವು ಸ್ವೀಕರಿಸಿದ್ದರೆ ಅದರ ಜ್ವಾಲೆಯಿಂದ ಸುಟ್ಟು ಬೂದಿಯಾಗುತ್ತಿದ್ದೆವು."

* * *

ಶ್ರೀಮಾತೆಯವರ ಅಪಾರ ಗುರುಕೃಪೆಯಿಂದ ಉದ್ಧಾರವನ್ನು ಪಡೆದ ಇನ್ನೊಬ್ಬ ದುರ್ನಡತೆಯ ವ್ಯಕ್ತಿ ಪ್ರಖ್ಯಾತ ಸೈನಿಕ. ಮಹಾ

ಯುದ್ಧದ ಸಮಯದಲ್ಲಿ ಅನೇಕ ದೇಶಗಳನ್ನು ಸುತ್ತಿಬಂದಿದ್ದ. ತನ್ನ ಧೈರ್ಯ ಸಾಹಸಗಳಿಗಾಗಿ ಅನೇಕ ಪುರಸ್ಕಾರಗಳು ಅವನಿಗೆ ದೊರೆತಿದ್ದವು. ಯಾರಿಂದಲೊ ಶ್ರೀಮಾತೆಯವರ ವಿಷಯವನ್ನು ತಿಳಿದು ಜಯರಾಂಬಾಟಿಗೆ ಬಂದ—ಸೈನಿಕ ಉಡುಪನ್ನೇ ಧರಿಸಿದ್ದ, ಕೊರಳಲ್ಲಿ ವೀರಪದಕಗಳ ಮಾಲೆ, ಸೊಂಟದಲ್ಲಿ ಕತ್ತಿ. ಶ್ರೀಮಾತೆಯವರನ್ನು ಸಮೀಪಿಸಿ ಪೇಟ, ಪದಕ, ಕತ್ತಿ ಎಲ್ಲವನ್ನೂ ಅವರ ಮುಂದಿರಿಸಿ ಸಾಷ್ಟಾಂಗ ಪ್ರಣಾಮ ಮಾಡಿ ಹೇಳಿದನು : "ತಾಯಿ, ಈ ಎಲ್ಲ ಪುರಸ್ಕಾರ ಬ್ರಿಟಿಷ್ ಸರ್ಕಾರ ನನಗೆ ಕೊಟ್ಟಿತು. ಎಲ್ಲವನ್ನೂ ನಿಮಗೆ ಅರ್ಪಿಸಿದ್ದೇನೆ." ಶ್ರೀಮಾತೆಯವರು ನಕ್ಕರು. ಅನಂತರ ಅವನು ತನ್ನ ಅಂತ ರಂಗವನ್ನು ಬಿಚ್ಚಿದ. ಅವನು ಈ ಪ್ರಪಂಚದಲ್ಲಿ ಮಾಡದ ದುಷ್ಕರ್ಮಗಳಾವುವೂ ಇರಲಿಲ್ಲ. ಅವನು ತನ್ನ ಇಡೀ ಜೀವನ ವೃತ್ತಾಂತವನ್ನು ಏನನ್ನೂ ಮುಚ್ಚಿಡದೆ ಶ್ರೀಮಾತೆಯವರ ಮುಂದೆ ನಿವೇದಿಸಿ ಕೊನೆಗೆ ಹೇಳಿದ : "ಈಗ ಹೇಳಿ, ನನ್ನ ಕೊಳೆಯನ್ನೆಲ್ಲ ತೊಳೆದು ಮಗುವನ್ನಾಗಿ ಸ್ವೀಕರಿಸುತ್ತೀರಾ?" "ಸ್ವೀಕರಿಸುತ್ತೇನೆ, ಆದರೆ ನನ್ನದೊಂದು ಷರತ್ತು. ನೀನದನ್ನು ಪಾಲಿಸುತ್ತೀಯ?"—ಶ್ರೀಮಾತೆಯವರು ನಗುತ್ತ ಕೇಳಿದರು. ಅವನು ಆಗಲಿ ಎಂದಾಗ ಶ್ರೀಮಾತೆಯವರು "ಆಮೇಲೆ ಹೇಳುತ್ತೇನೆ, ಈಗ ವಿಶ್ರಾಂತಿ ತೆಗೆದುಕೊ" ಎಂದು ಹೇಳಿ ಅವನನ್ನು ಕಳಿಸಿದರು.

ಅಲ್ಲಿ ನೆರೆದಿದ್ದ ಭಕ್ತರೆಲ್ಲ ಶ್ರೀಮಾತೆಯವರಿಗೆ ಹೇಳಿದರು. "ತಾಯಿ, ಅವನಿಗೆ ಖಂಡಿತ ನೀವು ದೀಕ್ಷೆ ನೀಡಕೂಡದು. ಅವನ ಪಾಪವನ್ನೆಲ್ಲ ನೀವು ಪಡೆದು ನಿಮ್ಮ ದೇಹಸ್ಥಿತಿ ಇನ್ನೂ ಹದಗೆಡುವುದು." ಶ್ರೀಮಾತೆಯವರು ಒಪ್ಪಲಿಲ್ಲ. "ನನ್ನಲ್ಲಿ ಶರಣಾಗಿರುವನು. ದುಷ್ಕರ್ಮಿಯೆಂದು ಕಳಿಸಿಬಿಡಲೆ? ಅವನಿಗೆ ಉತ್ತಮನಾಗುವ ಒಂದು ಅವಕಾಶ ಬಂದಿದೆ. ನಾನವನನ್ನು ತಿರಸ್ಕರಿಸಿದರೆ ಇನ್ನೂ ಕೆಟ್ಟುಹೋಗುವನು" ಎಂದು ಕನಿಕರದಿಂದ ನುಡಿದರು. ಸ್ವಲ್ಪ ವಿಶ್ರಾಂತಿಯನಂತರ ಆ ಸೈನಿಕನು ಬಂದು ಆ ಷರತ್ತು ಏನೆಂದು ಶ್ರೀಮಾತೆಯವರನ್ನು ಕೇಳಿದ. ಅವರಂದರು: "ನಾನು ನಿನಗೆ ದೀಕ್ಷೆ ನೀಡುತ್ತೇನೆ. ಆದರೆ ನನ್ನಿಂದ ಮಂತ್ರ ವನ್ನು ಪಡೆದು ನೀನು ಎರಡು ನಿಯಮಗಳನ್ನು ಪಾಲಿಸಬೇಕು. ಒಂದು—ನೀನು ಎಂದೂ ಮದುವೆಯಾಗಕೂಡದು; ಎರಡ ನೆಯದಾಗಿ, ಯಾವ ಸತೀನಾರಿಯ ಮಾನವನ್ನೂ ನಷ್ಟಗೊಳಿಸ ಕೂಡದು. ಈ ರೀತಿ ಶಪಥ ಮಾಡಬೇಕು." ಆ ಸೈನಿಕ ಸ್ವಲ್ಪ ಹೊತ್ತು ಚಿಂತಿಸಿ ಅನಂತರ ಹೇಳಿದ: "ಸತ್ಯವಾಗಿ ಹೇಳುತ್ತೇನೆ, ತಾಯಿ. ಮದುವೆ ಮಾಡಿಕೊಳ್ಳಬೇಕೆಂಬ ಆಸೆ ನನಗಿದೆ. ಅದಿಲ್ಲ ದಿದ್ದರೆ ಏತಕ್ಕಾಗಿ ಇಷ್ಟೊಂದು ಹಣ ಸಂಗ್ರಹಿಸಬೇಕಿತ್ತು?" "ಆದಾಗದು. ಇದೇ ನನ್ನ ಷರತ್ತು. ನೀನು ಉಂಡು ತಿಂದು ಓಡಾಡಿಕೊಂಡು ಸುಖವಾಗಿರು. ಅದರಿಂದೇನೂ ತೊಂದರೆ ಯಿಲ್ಲ. ಆದರೆ ಈ ಎರಡನ್ನು ನೀನು ಪಾಲಿಸಲೇಬೇಕು" ಎಂದು ದೃಢವಾಗಿ ನುಡಿದರು ಶ್ರೀಮಾತೆಯವರು. ತುಂಬ ಹೊತ್ತು ಯೋಚಿಸಿ ಸೈನಿಕನು ಶ್ರೀಮಾತೆಯವರ ಮಾತಿಗೆ ಒಪ್ಪಿಗೆ ಇತ್ತ. ಅನಂತರ ದೀಕ್ಷೆಯಾಯಿತು. ಮುಂದೆ ಅವನು ಉತ್ತಮ ಬಾಳನ್ನು ನಡೆಸಿದ.

* * *

ಶ್ರೀಮತಿ ಕ್ಷೀರೋದಬಾಲಾ ರಾಯ್‌ಳ ಈ ಕೆಳಗಿನ ಮಾತಿ ನಲ್ಲಿ ಶ್ರೀಮಾತೆಯವರ ಗುರುಕೃಪೆಯ ಅದ್ಭುತ ಶಕ್ತಿಯ ಪರಿ ಚಯವಾಗುವುದು: "ನನಗೆ ಮದುವೆಯಾದಾಗ ಹತ್ತು ವರ್ಷ, ಹದಿನೈದನೆಯ ವರ್ಷದಲ್ಲಿ ವಿಧವೆಯಾದೆ. ಶ್ರೀಮಾತೆಯವರ ಚರಣಾಶ್ರಯವನ್ನು ಪಡೆದು ಅವರಿಗೆ ಹೇಳಿದೆ, 'ತಾಯಿ, ನಾನು ತಮ್ಮಡಿಯಲ್ಲಿ ಶರಣಾಗಿರುವೆನು. ದಯೆಯಿರಿಸಿ ನನ್ನನ್ನು ರಕ್ಷಿಸಿ' ಎಂದು. ಶ್ರೀಮಾತೆಯವರು ಆಶ್ವಾಸನೆಯಿತ್ತರು : 'ಏನೂ ಭಯಪಡಬೇಕಾಗಿಲ್ಲ; ಠಾಕುರರು ನಿನ್ನ ಕೈಹಿಡಿದು ನಡೆಸಿಕೊಂಡು ಹೋಗುವರು' ಎಂದು. ಅವರ ಬಾಯಿಂದ ಬಂದ ಒಂದು ಶಬ್ದವೂ ಅಸತ್ಯವಾಗಲಿಲ್ಲ. ನನಗೀಗ ಅರವತ್ತು ವರ್ಷ. ಶ್ರೀಮಾತೆಯವರ ಪವಿತ್ರ ಹಸ್ತ ನನ್ನ ತಲೆಯನ್ನು ಸ್ಪರ್ಶಿಸಿದೆ ಹಾಗೂ ನನ್ನ ತಲೆ ಮತ್ತು ಕೈ ಅವರ ಶ್ರೀಚರಣವನ್ನು ಸ್ಪರ್ಶಿಸಿವೆ. ಹೀಗೆ ನಾನು ಧನ್ಯಳಾದೆ. ಅವರಿತ್ತ ಭರವಸೆಯ ಮೇಲೆಯೆ ಇಷ್ಟು ವರ್ಷವೂ ನಾನು ಬದುಕಿರುವೆನು, ಒಮ್ಮೆಯೂ ಕೂಡ ಭೋಗವಾಸನೆಯಿಂದ ನಾನು ಪೀಡಿತ ಳಾಗಿಲ್ಲ! ಬರಿ ಆನಂದವೊಂದನ್ನೆ ನಾನು ಅನುಭವಿಸಿರುವುದು. ನಾನು ಮಂತ್ರದೀಕ್ಷೆಯನ್ನು ಪಡೆದ ದಿನವೊಂದನ್ನು ಬಿಟ್ಟರೆ ಅವರೆಂದೂ ನಾನು ಏನು ಮಾಡಬೇಕೆಂಬುದರ ಬಗ್ಗೆ ಸಲಹೆ ನೀಡಲಿಲ್ಲ. ಠಾಕುರರೇ ಎಲ್ಲ ಮಾಡುವರೆಂದು ಅವರು ಹೇಳುತ್ತಿದ್ದರು. ಇದು ನಮಗೆ ಅರ್ಥವಾಗದಿರಬಹುದು, ಆದರೆ ಅವರ ಮಾತು ಅಕ್ಷರಶಃ ಸತ್ಯ. ಠಾಕುರ್ ಮತ್ತು ಶ್ರೀಮಾತೆ ಯವರನ್ನು ಯಾವಾಗಲೂ ಕರೆಯಲಾಗದೆ ಇದ್ದರೂ ಅವರು ತಮ್ಮ ಮಕ್ಕಳನ್ನು ಎಲ್ಲ ಅಪಾಯಗಳಿಂದಲೂ ರಕ್ಷಿಸುವರು. ಅವರ ಅನುಗ್ರಹವಿಲ್ಲದೆ ಕೇವಲ ಸ್ವಪ್ರಯತ್ನದಿಂದ ಯಾರೂ ಪ್ರಾಪಂಚಿಕ ವ್ಯಾಮೋಹವನ್ನು ಜಯಿಸಲಾರರೆಂಬುದು ನನ್ನ ದೃಢ ವಿಶ್ವಾಸ."

* * *

ಶ್ರೀಮಾತೆಯವರು ಹೇಳುತ್ತಿದ್ದರು : "ಇಲ್ಲಿಗೆ ಯಾರು ಬರು ತ್ತಾರೊ ಅವರೆಲ್ಲ ನನ್ನ ಮಕ್ಕಳು, ಅವರ ಮುಕ್ತಿ ಕಟ್ಟಿಟ್ಟ ಬುತ್ತಿ. ನನ್ನ ಮಕ್ಕಳನ್ನು ನರಕಕ್ಕೆ ಹಾಕಲು ವಿಧಿಗೆ ಸಾಧ್ಯವಾಗದು. ನನ್ನ ಮೇಲೆ ಎಲ್ಲ ಭಾರ ಹಾಕಿ ನಿಶ್ಚಿಂತೆಯಿಂದಿರು. ಮತ್ತೆ ಇದಿಷ್ಟನ್ನು ನೆನಪಿನಲ್ಲಿಟ್ಟುಕೊ, ನಿಮ್ಮ ಹಿಂದೆ ಒಬ್ಬರಿದ್ದಾರೆ. ಅವರು ಸಮಯ ಬಂದಾಗ ನಿಮ್ಮೆಲ್ಲರನ್ನೂ ಆ ಪರಂಧಾಮಕ್ಕೆ ಕರೆದು ಕೊಂಡು ಹೋಗುವರು."

**ಆ ಗಡಿಯಾರ ಟಿಕ್ ಟಿಕ್ ಎನ್ನುವಂತೆ ಭಗವನ್ನಾಮ ವನ್ನು ಉಚ್ಚರಿಸು. ಅದು ಎಲ್ಲವನ್ನೂ ಸಾಧಿಸುವುದು. ಮತ್ತೇನೂ ಬೇಕಾಗಿಲ್ಲ.** —ಶ್ರೀಶಾರದಾದೇವಿ